# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ

**ಕು**ಟುಂಬವು ಮಾನವ ಸಮಾಜದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸಿದೆ. ಮಕ್ಕಳನ್ನು ಉತ್ತಮ ವ್ಯಕ್ತಿತ್ವದ ವಯಸ್ಕರನ್ನಾಗಿ ಬೆಳೆಸಲಿಕ್ಕಾಗಿ ಕುಟುಂಬವು ಅತ್ಯುತ್ತಮವಾದ ಏರ್ಪಾಡಾಗಿದೆ. ತಾಯ್ತನ ಅಥವಾ ಪಿತೃತ್ವದ ಆನಂದವು ಹೆತ್ತವರಿಗೆ ಭಗವಂತನಿಂದ ದೊರೆತ ಒಂದು ಅಮೂಲ್ಯವಾದ ಕೊಡುಗೆ. ಜನನದಾರಂಭದಿಂದಲೇ ತಾಯಿಯ ಮತ್ತು ನವಜಾತ ಶಿಶುವಿನ ನಡುವೆ ಮೂಡುವ ಸುಂದರವಾದ ಅನುರಾಗ, ಹಾಗೂ ಒಬ್ಬ ಒಳ್ಳೆಯ ತಂದೆಗೆ ತನ್ನ ಸಂತಾನದೊಂದಿಗೆ ಹೃದಯೋಲ್ಲಾಸ ತರುವ ಪ್ರೀತಿಯುತ ಸಂಬಂಧ—ಇವು ಮಗುವಿನ ಭಾವಾತ್ಮಕ ಅಗತ್ಯಗಳನ್ನು ತುಂಬಿಸಲು ನಿರ್ಣಯಾತ್ಮಕವಾಗಿವೆ.

ಮಕ್ಕಳನ್ನು ಬೆಳೆಸುವುದು ಒಂದು ಸುಂದರವಾದ ಕಲೆಯಂತೆ. ಇದಕ್ಕೆ ಹೆತ್ತವರಿಂದ ಒಂದಷ್ಟು ತಾಳ್ಮೆ, ತ್ಯಾಗ ಹಾಗೂ ಪ್ರೀತಿಯು ಅವಶ್ಯಕವಾಗಿ ಬೇಕಾಗಿದೆ. ಒಂದು ಕಟ್ಟಡದ ಗುಣಮಟ್ಟವು ಕಟ್ಟಡ ನಿರ್ಮಾಣದಲ್ಲಿ ಬಳಸಲ್ಪಟ್ಟ ಸಾಮಗ್ರಿಗಳ ಗುಣಮಟ್ಟವನ್ನು ಅವಲಂಬಿಸಿರುವಂತೆ, ಒಂದು ಮಗುವಿನ ವ್ಯಕ್ತಿತ್ವ ನಿರ್ಮಾಣವು ನಂಬಿಕೆ, ವಿವೇಕ, ವಿವೇಚನಾಶಕ್ತಿ, ಸತ್ಯನಿಷ್ಠೆ, ಗೌರವ, ಪ್ರೇಮ ಇವೇ ಮುಂತಾದ ಮಾನವೀಯ ಗುಣಗಳನ್ನು ಅವಲಂಬಿಸಿರುತ್ತದೆ.

> ಒಬ್ಬ ಉತ್ತಮ ತಾಯಿ ಸಾವಿರ ಉಪಾಧ್ಯಾಯರುಗಳಿಗೆ ಸಮ.
>
> —(*Herbart*) ಹರ್ಬಾರ್ಟ್

ಮಕ್ಕಳ ಮನಸ್ಸು ಮತ್ತು ಹೃದಯವನ್ನು ಸರಿಪಡಿಸುವ ತರಬೇತಿಯೇ ಶಿಸ್ತು. ಮಕ್ಕಳು ಬಾಲ್ಯದಿಂದಲೇ ಕೆಲವು ಯೋಗ್ಯವಾದ ತತ್ವಗಳಿಗೆ ಅಂಟಿಕೊಳ್ಳುವ ಹಾಗೆ ತಿದ್ದುಪಾಟನ್ನು ಮಾಡುವುದೇ ತರಬೇತಿಯಾಗಿದೆ. ಮಕ್ಕಳು ಯಾವಾಗಲೂ ಸರಿಯಾದುದನ್ನೇ ಆಯ್ದುಕೊಳ್ಳುವುದಿಲ್ಲ. ಅವರಿಗೆ ಶಿಸ್ತಿನ ಅವಶ್ಯಕತೆ ಇದೆ. ಹಾಗೆಂದು ಮಕ್ಕಳು ನಾವು ಬಯಸುವ ರೀತಿಯಲ್ಲಿ ವರ್ತಿಸುವಂತೆ ಏರ್ಪಡಿಸಬಲ್ಲ ಕಂಪ್ಯೂಟರುಗಳಲ್ಲ. ನಿಶ್ಚಯವಾಗಿ ಅವರು ತರುಣಾವಸ್ಥೆಗೆ ಬೆಳೆಯುತ್ತಿದ್ದಂತೇ ತಾವೇ ಮಾಡಿಕೊಳ್ಳುವ ನಿರ್ಣಯಗಳಿಗೆ ಮುಂದೆ ಜವಾಬ್ದಾರರಾಗಿರುವ ಸ್ವತಂತ್ರ ಜೀವಿಗಳು.

ಮಕ್ಕಳಿಗೆ ಶಿಸ್ತಿನ ಅಗತ್ಯವಿದೆಯೆಂದು ಅವರನ್ನು ಗದರಿಸಿ, ಬೆದರಿಸಿ ಅಥವಾ ಬೈದು ಅವಮಾನಿಸುವುದು ಸರಿಯಲ್ಲ. ಇದರಿಂದ ಮಗುವಿನ ಆತ್ಮವಿಶ್ವಾಸಕ್ಕೆ ಧಕ್ಕೆಯುಂಟಾಗುವುದು. ವಿವಿಧ ಮಕ್ಕಳಿಗೆ ವಿವಿಧ ರೀತಿಯ ಶಿಸ್ತಿನ ಅಗತ್ಯವಿರುತ್ತದೆ. ಕೆಲವು ಮಕ್ಕಳಲ್ಲಿ ಬೆತ್ತ ಬೆದರಿಕೆಗಳಿಂದ ನಿಯಂತ್ರಣವುಂಟಾಗಬಹುದೇನೊ. ಆದರೆ ತನಗೆ ಏಕೆ ಶಿಕ್ಷೆಯು ಕೊಡಲಾಗುತ್ತಿದೆ ಎಂದು ಮಗುವು ತಿಳಿದುಕೊಳ್ಳುವಂತಾಗಬೇಕು. ಇದರಿಂದ ಮಗುವಿಗೆ ಹೆತ್ತವರ ಬಗ್ಗೆ ತಿರಸ್ಕಾರ ಭಾವನೆ ಉಂಟಾಗಬಾರದು.

ಕೆಲವು ಹೆತ್ತವರು ಸ್ವಚ್ಛಂದ ಅವಕಾಶವನ್ನೇ ಪ್ರೀತಿಯೆಂದು ತಪ್ಪಾಗಿ ಗ್ರಹಿಸಿ ಸ್ಪಷ್ಟವಾದ ಮತ್ತು ಸುಸಂಗತವಾದ ಹಾಗೂ ನ್ಯಾಯಸಮ್ಮತವಾದ ನಿಯಮಗಳನ್ನು ಮಕ್ಕಳ ಮುಂದಿಡಲು ನಿರ್ಲಕ್ಷಿಸಿದರೆ, ಮತ್ತೆ ಕೆಲವರು ಸಕಲ ಬಾಹ್ಯಪ್ರಭಾವಗಳೂ ಹಾನಿಕರವೆಂದು ತಿಳಿದು ಬಹಳ ಕಠಿಣವಾಗಿ ನಿರ್ಬಂಧಿಸಿ ಶಿಸ್ತಿಗೊಳಪಡಿಸುತ್ತಾರೆ. ಈ ಎರಡೂ ಅತಿರೇಕಗಳ ನಡುವೆ ಒಂದು ಸಮತೆಯನ್ನು ಸಾಧಿಸಿಕೊಂಡು ಬರುವುದು, ಯಾವಾಗಲೂ ಅಷ್ಟು ಸುಲಭವಾಗಿರುವುದಿಲ್ಲ.

—ಎಂ.ಗೌರಿ, ಮೈಸೂರು

**ಮ**ಕ್ಕಳ ಜೀವನ ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ ಬಹಳ ಮಹತ್ವವಾದದ್ದು ಮತ್ತು ಜವಾಬ್ದಾರಿಯುತವಾದದ್ದು. ಇಂದು ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವುದು ಒಂದು ಸವಾಲೇ ಆಗಿದೆ. ಅವಿಭಕ್ತ ಕುಟುಂಬಗಳು ಕಡಿಮೆಯಾದಂತೆ, ಮಕ್ಕಳಲ್ಲಿ ಹಿರಿಯರು, ಕಿರಿಯರು, ಬಂಧುಗಳಲ್ಲಿ ಇರಬೇಕಾದ ಪ್ರೀತಿ ಗೌರವ, ತಾಳ್ಮೆ ಮುಂತಾದ ಗುಣಗಳನ್ನು ಸಹಜವಾಗಿ ಕಲಿಯಲು ಆಗದೆ ತಂದೆ ತಾಯಿಗಳೆ ಶ್ರಮಿಸಿ ಕಲಿಸುವಂತಾಗಿದೆ.

ತಂದೆತಾಯಿಗಳು ತಮ್ಮ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದನ್ನು ಇಬ್ಬರೂ ಒಮ್ಮತದಿಂದ ನಿರ್ಧರಿಸಬೇಕು. ಒಂದು ಗುರಿಯನ್ನು ಇಟ್ಟುಕೊಂಡು, ಮಗುವಿಗೆ ಪ್ರೀತಿಯ ಜೊತೆಗೆ ಶಿಸ್ತನ್ನು ಸೇರಿಸಿ, ತಪ್ಪು ಮಾಡಿದಾಗ ಅದನ್ನು ಪ್ರೀತಿಯಿಂದ ತಿಳಿಸಿ, ತಾಳ್ಮೆಯಿಂದ ತಿದ್ದಬೇಕು. ಶಿಕ್ಷೆ ಕೊಡಬೇಕಾದಾಗ ಅದು ಮಿತಿಯಾಗಿ ಪ್ರೀತಿಯಿಂದ ಕೊಡಬೇಕೇ ಹೊರತು ಸಿಟ್ಟು ಮತ್ತು ಬೇಸರದಿಂದ ಕೊಡಿರಬಾರದು. ಆಟ ಪಾಠಗಳಲ್ಲಿ ಮಿತಿ ಇರಬೇಕು. ಮನೋರಂಜನೆಯ ಜೊತೆ ಜ್ಞಾನಾರ್ಜನೆಯನ್ನು ಮಾಡಿಸಬೇಕು. ಮಕ್ಕಳ ಮುಂದೆ ಜಗಳವಾಡುವುದು, ಅಸಭ್ಯವಾಗಿ ವರ್ತಿಸುವುದು ಇರಬಾರದು. ಟಿ.ವಿ. ಮತ್ತು ಸಿನಿಮಾ ಇಂಥದ್ದನ್ನು ಕಡಿಮೆ ಮಾಡಿ ಮಕ್ಕಳ ಜೊತೆ ಬೆರೆತು ನಲಿಯಬೇಕು.

ತಂದೆತಾಯಿಗಳು ತಮ್ಮ ಹಿರಿಯರಿಗೆ ಪ್ರೀತಿ ಗೌರವ ತೋರಿಸಿ ಅದನ್ನು ಮಕ್ಕಳಿಗೆ ಕಲಿಸಬೇಕು. ಅಲ್ಲದೆ ಮಕ್ಕಳ ಸ್ನೇಹಿತರನ್ನೂ ಪರಿಚಯ ಮಾಡಿಕೊಂಡು ಆಗಾಗ್ಗೆ ಅವರ ಜೊತೆ ಬೆರೆತು ಅವರ ಚಲನವಲನಗಳನ್ನು ಗಮನಿಸಿ ಸೂಕ್ತ ಮಾರ್ಗದರ್ಶನದಲ್ಲಿ ಅವರನ್ನು ಗುರಿ ತಲುಪಿಸಬೇಕು. ಇದಕ್ಕೆ ಮಕ್ಕಳೂ ಸ್ಪಂದಿಸಿದರೆ ಸರಿ, ಇಲ್ಲದಿದ್ದರೆ ಮಕ್ಕಳು ಬೆಳೆದಂತೆ ಅವರ ನಡೆ ನುಡಿಗಳು ತಂದೆತಾಯಿಗಳಿಗೆ ಕಠಿಣ ಪರೀಕ್ಷೆಯಾಗಿ, ಅದನ್ನು ಅವರು ಸಮರ್ಥವಾಗಿ ಎದುರಿಸಬೇಕಾಗುತ್ತದೆ.

—ವಸಂತರಾಜು, ಬೆಂಗಳೂರು.

ಮಕ್ಕಳನ್ನು ತಮ್ಮ ಆರ್ಥಿಕ ಅನುಕೂಲತೆಗೆ ತಕ್ಕಂತೆ ತಮ್ಮ ಶಕ್ತ್ಯನುಸಾರ ಬೆಳೆಸಬೇಕು. ಆಕಾಶಕ್ಕೆ ಏಣಿಯಿಡಲು ಪ್ರಯತ್ನಿಸಬಾರದು. ಕಡಿಮೆ ಆದಾಯವಿದ್ದಾಗ್ಯೂ ಆಡಂಬರಗಳಿಗೆ ಬಲಿಯಾಗದಿದ್ದರೆ ಜೀವನವನ್ನು ಅಚ್ಚುಕಟ್ಟಾಗಿ ನಡೆಸಲು ಸಾಧ್ಯ. ತಂದೆತಾಯಿಗಳ ಹೊಂದಾಣಿಕೆಯ ಜೀವನ, ಆರೋಗ್ಯಪೂರ್ಣವಾದ ಧೋರಣೆ ಮಗುವಿಗೆ ಗಿಳಿಪಾಠದಂತೆ! ಮಕ್ಕಳಿಗೆ ಕಲೆ-ಸಂಸ್ಕೃತಿಯ ಪಾಠ ಹೇಳಿ ಅದಕ್ಕೆ ತೆರೆದುಕೊಳ್ಳುವಂತೆ ಮಾಡಬೇಕು. ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಸಂಕುಚಿತ, ಸ್ವಾರ್ಥಪರ, ದ್ವೇಷಾಸೂಯೆಗಳ ಕೂಪ ಮಂಡೂಕದಂತಿರುವ ಮಾನವನು ಪ್ರೀತಿಯೆಂಬ ಬೀಜವನ್ನು ಬಿತ್ತಿ ದ್ವೇಷವೆಂಬ ದಳ್ಳುರಿಯನ್ನು ದಹಿಸಬೇಕು. ಹಣವೊಂದೇ ಬದುಕಲ್ಲವೆಂದು ಹೇಳಿ, ಹಿತಮಿತ ಆಹಾರ, ಉಡುಪು, ನಡತೆಯನ್ನು ಚಿಂತನಾತ್ಮಕವಾಗಿ ನೀಡಬೇಕು. ಸತ್ಸಂಗಗಳು, ವ್ರತ ನೇಮಗಳನ್ನು ಮನೆಯಲ್ಲಿ ಆಚರಿಸಿದಾಗ ಮನೆಯೇ ನಿಜವಾದ ಅರ್ಥದಲ್ಲಿ ಮೊದಲ ಪಾಠಶಾಲೆ ಎನಿಸಿಕೊಳ್ಳುತ್ತದೆ. ಉತ್ತಮ ಮಗುವೊಂದನ್ನು ಸಮಾಜಕ್ಕೆ ಕೊಡುವುದರ ಮೂಲಕ ಈ ಮಾಡಬಹುದು. ಇದು ತಂದೆತಾಯಿಗಳಿಂದ ಮಕ್ಕಳಿಗೆ ಸಿಗುವಂತಾಗಲಿ.

—ಕುಮಾರಿ ಪಿ.ಸಿ. ದಮಯಂತಿ ಪೂಜೆ,
ಕನ್ನಡ ಶಿಕ್ಷಕಿ, ಕೊಡಗು ವಿದ್ಯಾಲಯ, ಮಡಿಕೇರಿ.

ಮಕ್ಕಳ ಬೆಳವಣಿಗೆಯ ಜವಾಬ್ದಾರಿಯನ್ನು ಹೊತ್ತ ತಂದೆ ತಾಯಿಗಳ ಮೇಲೆ ಸಮಾಜ, ಸರ್ಕಾರದ ನೀತಿ, ಮಾಧ್ಯಮಗಳೆಲ್ಲವೂ ಪ್ರಭಾವ ಬೀರುತ್ತಿವೆ. ಪಾಶ್ಚಾತ್ಯರ ಅನುಕರಣೆ ಮಾಡಿ ಅವರ ಭಾಷೆ ಆಹಾರ, ಉಡಿಗೆ ತೊಡಿಗೆ, ಆಚಾರ-ವಿಚಾರ ಅನುಕರಿಸಿದರೆ ನಾವು ನಮ್ಮ ಮಕ್ಕಳು ಸುಧಾರಿಸುತ್ತೇವೆ ಎನ್ನುವ ಭಾವನೆ ಹಿರಿಯರಲ್ಲಿ ತೊಲಗಿದರೆ ಮಾತ್ರ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಬಹುದು. ಶಿಶುವಿಹಾರದಿಂದ ಹಿಡಿದು ಶಾಲಾ ಕಾಲೇಜುಗಳವರೆಗೆ ವ್ಯಾಪಿಸಿರುವ ಟ್ಯೂಷನ್‌ಗೆ ಕಳುಹಿಸಿ ಓದಿನಲ್ಲಿ ಮುಂದುವರಿದರೆ ಸಾಕು ತಮ್ಮ ಪ್ರತಿಷ್ಠೆ ಹೆಚ್ಚುತ್ತದೆ ಎಂದು ಭಾವಿಸದೆ, ಮಕ್ಕಳ ಶೀಲ ನಿರ್ಮಾಣಕ್ಕೆ ಬೇಕಾಗುವ ಸಾಂಸ್ಕೃತಿಕ ಶಿಕ್ಷಣವನ್ನು ಕೊಡುವ ಕಡೆ ನಾವು ಗಮನ ಹರಿಸಬೇಕು.

—ಡಾ. ಆರ್.ಜಿ. ಗಜೇಂದ್ರಗಡ, ರಾಯಚೂರು.

"ಮಗುವು ಮಾನವ ತಂದೆ" ಎಂಬುದನು ಮರೆಯದಿರಿ
ತಾಯ್ತಂದೆ ನಿಮಗೊಂದು ನಮ್ಮ ಮೊರೆಯು ।
ಮಾಡಿದರೆ ನನ್ನಿತಾ ಮಾಡುವರು ನನ್ನಿಯಿದು
ಕಲಿಕಾಲದೊಂದು ಈ ನಿತ್ಯಕರೆಯು ॥ ೧ ॥

ನಿಮ್ಮ ವಂಶದ ಸಸಿಯು ಹೆಮ್ಮರವ ಆಗಲಿಕೆ
ನೆಮ್ಮದಿಯ ನಿಂಬಾಳು ತಾಯಿಬೇರು ।
ನಿಮ್ಮ ಬದುಕೇ ನಮಗೆ ಸತ್ಯಸಾಕ್ಷ್ಯಾಧಾರ
ನಡೆಯಿಲ್ಲದಾ ನುಡಿಯು ರೊಜ್ಜುನೀರು ॥೨ ॥

ನಿಮ್ಮ ಕಾಯಕದಲ್ಲಿ ಅಡ್ಡಿಬಾರೆವು ನಾವು
ನೆಮ್ಮದಿಯು ಮನೆಯಲ್ಲಿ ಅದು ಮಂಗಳ ।
ನಭದ ಸೂರ್ಯನಕಿಂತ ಶುಭ ನಿಮ್ಮ ಹಾರೈಕೆ
ನಮ್ಮ ಬಾಳಿಗೆ ಬೆಳಕು ಬೆಳದಿಂಗಳು ॥೩ ॥

ತಾಯ್ತಂದೆ ವಾತ್ಸಲ್ಯ ಅದು ನಮಗೆ ಬಹುಮೂಲ್ಯ
ಅದರಿಂದಲೇ ನಮ್ಮ ಬಾಳು ಯೋಗ್ಯ ।
ತಾಯಿ ಉಣಿಸಿದ ತುತ್ತು ಅವಳು ಕೊಟ್ಟಿಹ ಮುತ್ತು
ವೃದ್ಧಿಸುವುದಾರೋಗ್ಯ ನಮ್ಮ ಭಾಗ್ಯ ॥೪ ॥

ದಿನಕ್ಕೊಂದು ಗಂಟೆ ಸಹ ಅನುವು ಮಾಡಿಕೊಂಡು
ನಮ್ಮೊಡನೆ ಮಗುವಂತೆ ನಲಿದಾಡಿರಿ ।
ಆಟಪಾಠಕೆ ಮೂಲ ಒಗ್ಗಟ್ಟು ಒಡನಾಟ
ಊಟದಲಿ ಸವಿಯನ್ನು ನೀವ್ನೀಡಿರಿ ॥೫ ॥

ಹೆತ್ತವರ ಹೊಣೆಯನ್ನು ಹೊತ್ತುಕೊಳ್ಳಿರಿ ನೀವು
ಸುತ್ತಮುತ್ತಲು ಜನಕೆ ದೂರಬೇಡಿ ।
ಇಂದಿನಾ ಮಗುತಾನು ಮುಂದಿನಾ ನಾಗರಿಕ
ಎಂದೆನುತ ಹಗುರಾಗಿ ಬಾಳಬೇಡಿ ॥೬ ॥

ನಿಮ್ಮ ಮಡಿಲಿನ ಸುಖವು ಮಮತೆ ಮಾಧುರ್ಯವದು
ಸಿಗದಂತೆ ನಮಗೀಗ ಮಾಡಬೇಡಿ ।
ಹತ್ತಿರದಿ ನೀವಿದ್ದು ದೂರ ಸರಿಯಲು ಬೇಡಿ
ಹುಂಕಾರ ಝುಂಕಾರ ಕೇಡು ನೋಡಿ ॥೭ ॥

ಪಶುಪಕ್ಷಿ ಸಾಕುವಿರಿ ಖುಷಿಯಾಗಿ ಇರಲೆಂದು
ಪಶುಪತಿಗೆ ಬೇಡುವಿರಿ ಪೂಜೆಮಾಡಿ ।
ಶಿಶುಗಳನು ಹೊರದೂಡಿ ಕಸಿವಿಸಿಯಗೊಳಿಸಿದರೆ
ವಸುಧೀಶ ಮೆಚ್ಚುವನೆ ಕೇಳಿನೋಡಿ ॥೮ ॥

"ಕಾಈಶ"(ಈಶ್ವರ ಕಾಪಸೆ) ಬೆಳಗಾವಿ.